ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 12.11.2024.

**<u>ಪಾಟೀ ಸವಾಲುಃ</u>** <u>ಪ್ರತಿವಾದಿ ಪರ ವಕೀಲರಿಂದಃ</u>

ನಿಡಿ-106ರ ತೀರ್ಪಿನ ಪ್ರತಿಯಲ್ಲಿ 6ನೇ ಪ್ರತಿವಾದಿ ಹೆಸರು ಜಮೀರ್ ಅಲಿ ತಂದೆ ಮೌಲಾಸಾಬ ಅಲಿಯಾಸ್ ಬಾಬುಮಿಯಾನ್ ಎಂದು ಬರೆದಿದೆ ಎಂದರೆ ಸರಿ. ಅದೇ ರೀತಿ 2 ರಿಂದ 4ನೇ ಆರೋಪಿಗಳ ಹೆಸರು ಬರೆಯಲಾಗಿದೆ ಎಂದರೆ ಸರಿ. ಸದರಿ ತೀರ್ಪು 2009ರಲ್ಲಿ ಆಗಿದೆ ಎಂದರೆ ಸರಿ. ನಾನು 2002ರಲ್ಲಿ ದಾವಾ ಸ್ವತ್ತುನ್ನು ಖರೀದಿಸಿರುತ್ತೇನೆ. ನಿಡಿ-108 ರಲ್ಲಿ ತಂದೆ ಹೆಸರು ಬರೆದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-110ರ ದಾಖಲೆ 7ನೇ ಪ್ರತಿವಾದಿಯದು ಆಗಿರುತ್ತದೆ. ನಿಡಿ-110ರಲ್ಲಿ ದಾಖಲೆಯಲ್ಲಿ ದಿಃ 24.05.2016 ರಂದು ನೀಡಿರುತ್ತಾರೆ. ನಿಡಿ-110ರ ದಾಖಲೆಯಲ್ಲಿ 7ನೇ ಪ್ರತಿವಾದಿ ತಂದೆ ಹೆಸರು ಮೌಲಾಸಾಬ ಎಂದು ಬರೆಯಲಾಗಿದೆ, ಅದರಲ್ಲಿ ಅಲಿಯಾಸ್ ಬಾಬುಮಿಯಾನ್ ಎಂದು ಬರೆದಿಲ್ಲ ಎಂದರೆ ಸರಿ. ನಿಡಿ-111ರ ಆಧಾರ ಕಾರ್ಡ್ 7ನೇ ಪ್ರತಿವಾದಿಯದು ಇರುತ್ತದೆ.

ನಿಡಿ-111ರ ದಾಖಲೆಯಲ್ಲಿ ತಂದೆ ಹೆಸರು ಅಲಿಯಾಸ್ ಬಾಬುವಿಯಾನ್ ಎಂದು ಬರೆದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ಎಲ್ಲ ದಾಖಲೆಗಳು ನಾನು ಜಮೀನು ಖರೀದಿಸುವ ಮುಂಚಿನದ್ದು ಆಗಿರುವುದಿಲ್ಲ, ಜಮೀನು ಖರೀದಿಸಿದ ನಂತರದ ದಾಖಲೆಗಳು ಆಗಿರುತ್ತವೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಮೌಲಾಸಾಬ ರವರು ತಮ್ಮ ಕೌಟುಂಬಿಕ ಅಡೆಚಣೆ ಸಲುವಾಗಿ ಜಮೀನು ಮಾರಾಟ ಮಾಡಿರುತ್ತಾನೆ ಎಂದು ಹೇಳಿದ ಸಂಗತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. 2002ರಲ್ಲಿ ಮೌಲಾಸಾಬನಿಗೆ ಅಣಕಾಸಿನ ಅಡೆಚಣೆ ಇರದೇ ಇರುವ ಕಾರಣ ಹಾಗೂ ಆತನ ಹೆಸರು ಪಹಣಿಯಲ್ಲಿ ಇರದೇ ಇರುವ ಕಾರಣ, ಆತನಿಗೆ ಮಾರುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಜಮೀನು ಮಾರಾಟ ಮಾಡುವ ಪೂರ್ವದಲ್ಲಿ 5-6 ತಿಂಗಳ ಮೊದಲು 6 ಮತ್ತು 7ನೇ ಪ್ರತಿವಾದಿಗಳ ಹೆಸರಿನಲ್ಲಿ ದಾವಾ ಸ್ವತ್ತುಗಳು ಮ್ಯೂಟೇಷನ್ ಆಗಿದ್ದವು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 1999ರಲ್ಲಿ ಅವರ ಹೆಸರಿನಲ್ಲಿ ಮ್ಯೂಟೇಷನ್ ಆಗಿತ್ತು ಎಂದು ನುಡಿಯುತ್ತಾರೆ.

1999 ರಿಂದ 2002ರವರೆಗೆ ಮೌಲಾಸಾಬ ಜೀವಂತ ಇದ್ದ ಎಂದರೆ ಸರಿ. ಒಂದು ವೇಳೆ ಮೌಲಾಸಾಬನಿಗೆ ಹಣಕಾಸಿನ ಅಡೆಚಣೆ ಇದ್ದಿದ್ದೆ ಆದಲ್ಲಿ ಆತ 6 ಮತ್ತು 7ನೇ ಪ್ರತಿವಾದಿಯರ ಹೆಸರಿನಲ್ಲಿ ಮಾಡುವ ಪ್ರಸಂಗ ಬರುತ್ತಿರಲಿಲ್ಲ, ತಾನೇ ಜಮೀನನ್ನು ನೇರವಾಗಿ ನನಗೆ ಮಾರಾಟ ಮಾಡುತ್ತಿದ್ದೆ ಎಂದರೆ, ಸಾಕ್ಷಿ ಅದು ಅವರ ಕೌಟುಂಬಿಕ ವಿಷಯವಾಗಿರುತ್ತದೆ, ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಖಂಡಿಕೆ 14ರಲ್ಲಿ ಮೌಲಾಸಾಬ ರವರ ಮಕ್ಕಳ ಮದ್ಯದಲ್ಲಿ ವಿಭಾಗವಾದ ಬಗ್ಗೆ ಬರೆದಿರುತ್ತೇವೆ ಎಂದರೆ ಸರಿ. ಆ ಬಗ್ಗೆ ನಾನು ವಿಭಾಗ ಪತ್ರವನ್ನು ನೋಡಿಲ್ಲ ಹಾಗೂ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನನಗೆ ಗೊತ್ತಿದ್ದ ಎಲ್ಲ ವಿಷಯಗಳನ್ನು ಸ್ವಲ್ಪ ಮುಚ್ಚಿಟ್ಟು ಸುಳ್ಳು ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರದಲ್ಲಿ 6 ಮತ್ತು 7ನೇ ಪ್ರತಿವಾದಿಯರ ತಂದೆ ಹೆಸರು ಮೌಲಾಸಾಬ ಅಲಿಯಾಸ್ ಬಾಬುಮಿಯಾನ್ ಎಂದು ಕರೆಯುತ್ತಿದ್ದರು ಎಂದು ಎಲ್ಲಿಯು ಬರೆದಿಲ್ಲ ಎಂದರೆ ಸರಿ. ಅದೇ ರೀತಿ ಎಲ್ಲಿಯು ಕೂಡಾ ಕ್ರಯ ಪತ್ರಗಳಲ್ಲಿ ಮೌಲಾಸಾಬ ರವರಿಗೆ, ಮೌಲಾಸಾಬಾ ಅಲಿಯಾಸ್ ಬಾಬುಮಿಯಾನ್ ಎಂದು ಕರೆಯುತ್ತಿದ್ದರು ಎಂದು ಬರೆದಿಲ್ಲ ಎಂದರೆ ಸರಿ. ವೈಜಾಪುರ ಗ್ರಾಮ ನನ್ನ ಊರು ಅಲ್ಲ ಹಾಗೂ ಆ ಊರಲ್ಲಿ ನನ್ನ ಮನೆ ಇರುವುದಿಲ್ಲ ಎಂದರೆ ಸರಿ. 6 ಮತ್ತು 7ನೇ ಪ್ರತಿವಾದಿಗಳ ಸೃಷ್ಟಿಸಿಕೊಂಡ ದಾಖಲೆಗಳ ಆಧಾರ ಮೇಲೆ ನಾನು ಸುಳ್ಳು ಕ್ರಯ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಕ್ರಯ ಪತ್ರ ನೋಂದಣಿ ಕಾಲಕ್ಕೆ ನಾನು 6 ಮತ್ತು 7ನೇ ಪ್ರತಿವಾದಿಗಳ ಚುನಾವಣೆ ಗುರುತಿನ ಚೀಟಿ ಮತ್ತು ಪಡಿತರ ಚೀಟಿಗಳನ್ನು ಕೊಟ್ಟಿರುವುದಿಲ್ಲ ಮತ್ತು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

6 ಮತ್ತು 7ನೇ ಪ್ರತಿವಾದಿಗಳು ಮೌಲಾಸಾಬನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ಅವರು ಬಾಬಾಮಿಯಾನ್ ಅಲಿಯಾಸ್ ಹುಸೇನ್ ಸಾಬ ತಂದೆ ನಬಿಸಾಬ ರವರ ಮಕ್ಕಳು ಆಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯರಿಗೆ ಗೊತ್ತಿರಲಾರದೇ ದಾವಾ ಸ್ವತ್ತುನ್ನು ಹೊಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 1 ರಿಂದ 5ನೇ ಪ್ರತಿವಾದಿಗಳ ಪರ ವಕೀಲರಿಂದಃ

ನಾನು ಕ್ರಯ ಪತ್ರ ನೋಂದಣಿ ಕಾಲಕ್ಕೆ 6 ಮತ್ತು 7ನೇ ಪ್ರತಿವಾದಿಗಳ ಮೌಲಾಸಾಬ ಅಲಿಯಸ್ ಬಾಬುಮಿಯಾನ್ ರವರ ಮಕ್ಕಳು ಇರುತ್ತಾರೆ ಎಂದು ಯಾವುದೇ ಟಿಸಿ ಮತ್ತು ಚುನಾವಣೆ ಗುರುತಿನ ಚೀಟಿಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ಮೌಲಾಸಾಬ ರವರಿಗೆ ಇಬ್ಬರು ಹೆಂಡತಿಯರು ಇರುತ್ತಾರೆ ಅವರ ನಿಖಾನಾಮವನ್ನು ನಾನು ನೋಡಿರುವುದಿಲ್ಲ. ಮೌಲಾಸಾಬ ರವರ ಇಬ್ಬರು ಹೆಂಡತಿಯರ ಸಂಬಂಧ ಏನು ಇತ್ತು ಎಂದು ನಾನು ವಿಚಾರ ಮಾಡಿಲ್ಲ. ಚಾಂದಬೀ,

ಮೌಲಂಬೀ ರವರ ಕಾಸಾ ತಂಗಿ ಇರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-40 ರಿಂದ ನಿಡಿ-87ರ ದಾಖಲೆಗಳಲ್ಲಿ ಸರ್ವೆ ನಂಬರ ಬರೆದಿಲ್ಲ ಎಂದರೆ ಸರಿ.

ಸಾಮಾನ್ಯವಾಗಿ ಸಕ್ಕರೆ ಕಾರ್ಖಾನೆ ಶೇರ್ ಇರದೇ ಇರುವಾಗ ಬೇರೆಯವರ ಹೆಸರಿನಲ್ಲಿ ಕಬ್ಬನ್ನು ಸಾಗಾಣಿಕೆ ಮಾಡಿ ಕಳುವುಹಿಸಬಹುದು ಎಂದರೆ ನನಗೆ ಗೊತ್ತಿಲ್ಲ, ನಿಡಿ-40 ರಿಂದ ನಿಡಿ-87ರ ದಾಖಲೆಗಳು ನಮ್ಮ ಜಮೀನುಗಳು ಆಗಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನಾನು ನೋಡಿದ ವಿಭಾದ ಪತ್ರದ ಮ್ಯೂಟೇಷನ್‌ದಲ್ಲಿ ಅಕ್ಕ-ತಂಗಿಯರು ಹೆಸರು ನೋಡಿರುವುದಿಲ್ಲ. ಅದೇ ತರ 6 ಮತ್ತು 7ನೇ ಪ್ರತಿವಾದಿಯರ ಅಕ್ಕ-ತಂಗಿಯರ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ನಾನು ಕೊಂಡುಕೊಂಡ ಕ್ರಯ ಪತ್ರದ ಪ್ರಕಾರ ಕಬ್ಜೆಯಲ್ಲಿ ಇರುತ್ತೇನೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ಈಗಲೂ ಕೂಡಾ 1 ರಿಂದ 5ನೇ ಪ್ರತಿವಾಗಳು ದಾವಾ ಸ್ವತ್ತುಗಳಲ್ಲಿ ಸಾಗುವಳಿ ವಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ತರಹ 6 ಮತ್ತು 7ನೇ ಪ್ರತಿವಾದಿಗಳು ನೋಂದಣಿ ಕಾಲಕ್ಕೆ ಬಂದು ಸಹಿ ಮಾಡಿರುತ್ತಾರೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 7 ಮತ್ತು 10ನೇ ಪ್ರತಿವಾದಿಗಳ ಪರ ವಕೀಲರಿಂದ:

(7 ಮತ್ತು 10ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಏನು ಇರುವುದಿಲ್ಲ ಎಂದು ಹೇಳಿರುತ್ತಾರೆ.)

**ಮರು ವಿಚಾರಣೆ:** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**